## ಕರ್ನಾಟಕ ಸರ್ಕಾರ

ಸಂಖ್ಯೆ: ಆಸಾನಿ/03/ಆಡಳಿತ-5/2022-23
5550-129

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 03.06.2022

### ಅಧಿಕೃತ ಜ್ಞಾಪನ

ವಿಷಯ: ದಿನಾಂಕ: 01.01.2022 ರಲ್ಲಿದ್ದಂತೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಗಣತಿದಾರರ ವೃಂದದ ಸಾಮಾನ್ಯ, ಉಳಿಕೆ ಮೂಲ ವೃಂದ (**Residual Cadre**) ಮತ್ತು ರಾಜ್ಯ ವ್ಯಾಪಿ ಸ್ಥಳೀಯ ವೃಂದದ (**Statewide local cadre**) ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ:
1. ನಿರ್ದೇಶನಾಲಯದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಆಸಾಂನಿ/02/ಆಡಳಿತ-5/2021-22, ದಿನಾಂಕ: 13.04.2022ರಲ್ಲಿ ಹೊರಡಿಸಲಾದ ಗಣತಿದಾರರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ.
2. ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಸಿಆಸುಇ/ 106/ ಸೇನೆನಿ 2021, ದಿನಾಂಕ: 10.12.2021.

*****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಅಧಿಕೃತ ಜ್ಞಾಪನದಲ್ಲಿ ದಿನಾಂಕ: 01.01.2022 ರಲ್ಲಿದ್ದಂತೆ ಗಣತಿದಾರರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಲಾಗಿತ್ತು. ಸದರಿ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ "ಆಕ್ಷೇಪಣೆಗಳೇನಾದರೂ" ಇದ್ದಲ್ಲಿ ನಿರ್ದಿಷ್ಟವಾದ, ಸೂಕ್ತವಾದ ಹಾಗೂ ನಂಬಲಾರ್ಹವಾದ ದಾಖಲೆಗಳೊಂದಿಗೆ ದಿನಾಂಕ : 10.05.2022ರ ಒಳಗಾಗಿ ಆಕ್ಷೇಪಣೆಗಳನ್ನು ಸಂಬಂಧಿಸಿದ ಮೇಲಾಧಿಕಾರಿಗಳ ಮುಖಾಂತರ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಸದರಿ ವೃಂದದಲ್ಲಿ ಆಕ್ಷೇಪಣೆಗಳು ನಿರ್ದೇಶನಾಲಯದಲ್ಲಿ ಸ್ವೀಕೃತವಾಗಿದ್ದು, ಶ್ರೀ ನಾಗಪ್ಪ, ಗಣತಿದಾರರು, ಇವರು ಜೇಷ್ಠತೆಯನ್ನು ರಾಜ್ಯವ್ಯಾಪಿ ಸ್ಥಳೀಯ ವೃಂದದಲ್ಲಿ ಪರಿಗಣಿಸುವಂತೆ ಕೋರಿರುತ್ತಾರೆ. ಆದರೆ ಸದರಿ ನೌಕರರು ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ ಗಣತಿದಾದರ ಹುದ್ದೆಗೆ ಉಳಿಕೆ ಮೂಲ ವೃಂದದಲ್ಲಿ ಆಯ್ಕೆಯಾಗಿರುತ್ತಾರೆ. ಆದ್ದರಿಂದ ಸದರಿ ನೌಕರರ ಆಕ್ಷೇಪಣೆಯನ್ನು ಪರಿಗಣಿಸಿರುವುದಿಲ್ಲ.

ಗಣತಿದಾರರ ವೃಂದದ ಸಾಮಾನ್ಯ, ಉಳಿಕೆ ಮೂಲ ವೃಂದ (**Residual Cadre**) ಮತ್ತು ರಾಜ್ಯ ವ್ಯಾಪಿ ಸ್ಥಳೀಯ ವೃಂದದ (**Statewide local cadre**) ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಈ ಜ್ಞಾಪನದೊಂದಿಗೆ ಲಗತ್ತಿಸಲಾದ ಅನುಬಂಧ-2, 2(ಎ) ಮತ್ತು2(ಬಿ)ಗಳಲ್ಲಿ ಹೊರಡಿಸಲಾಗಿದೆ.

ಗಣತಿದಾರರ ವೃಂದದ ಅಂತಿಮ ಜೇಷ್ಠತಾ ಪಟ್ಟಿಯು ನ್ಯಾಯಾಲಯದಿಂದ ನೀಡುವ ತೀರ್ಪುಗಳಿಗೆ ಹಾಗೂ ಸರ್ಕಾರದಿಂದ ಹೊರಡಿಸಲಾಗುವ ಆದೇಶಗಳ ಷರತ್ತಿಗೆ ಒಳಪಟ್ಟಿರುತ್ತದೆ. ಸದರಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಈ ನಿರ್ದೇಶನಾಲಯದ ವೆಬ್‌ಸೈಟ್- www.des.kar.nic.inರಲ್ಲಿ ಪ್ರಕಟಿಸಲಾಗಿದೆ.

(ಮಧುರಾಮ್. ಎನ್)
ನಿರ್ದೇಶಕರು

ಗೆ,
ಸಂಬಂಧಿಸಿದ ನೌಕರರುಗಳಿಗೆ.

ಪ್ರತಿಯನ್ನು :
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ , ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ.

2. ಕೇಂದ್ರ ಕಚೇರಿಯ ಎಲ್ಲಾ ಜಂಟಿ ನಿರ್ದೇಶಕರಿಗಳಿಗೆ ಮಾಹಿತಿಗಾಗಿ.
3. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಇವರ ಮಾಹಿತಿಗಾಗಿ–ಸದರಿ ಜ್ಯೇಷ್ಠತಾ ಪಟ್ಟಿಯ ಪ್ರತಿಯನ್ನು ನಿಮ್ಮ ಕಚೇರಿ/ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗಣತಿದಾರರುಗಳಿಗೆ ತಲುಪಿಸಿ ಸ್ವೀಕೃತಿಯನ್ನು ನಿರ್ದೇಶನಾಲಯಕ್ಕೆ ತಪ್ಪದೇ ಕಳುಹಿಸಲು ಸೂಚಿಸಿದೆ.
4. ನಿರ್ದೇಶಕರ ಆಪ್ತ ಶಾಖೆಗೆ.
5. ಪತ್ರಾಂಕಿತ ವ್ಯವಸ್ಥಾಪಕರು, ಲೆಕ್ಕ ಮತ್ತು ಆಡಳಿತ ವಿಭಾಗ, ಕೇಂದ್ರ ಕಚೇರಿ, ಬೆಂಗಳೂರು.
6. ಕಚೇರಿ ಪ್ರತಿ.